ವಿಷಯ : ರಾಜ್ಯದಲ್ಲಿಯ ಚಿಕ್ಕ ನೀರಾವರಿಯ ವಿವರಗಳ ಕುರಿತಾಗಿ.

ಪ್ರ. 98 (176) ಶ್ರೀ ಪಿ. ರಾಮಚಂದ್ರರಾವ್ (ಉಳ್ಳಾಲ) .— ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ನಮ್ಮ ರಾಜ್ಯದ ಒಟ್ಟು ನೀರಾವರಿ ಪ್ರದೇಶದಲ್ಲಿ ಸಣ್ಣ ನೀರಾವರಿಯಿಂದಲೇ ನೀರಾವರಿ ಆಗುವ ಪ್ರದೇಶ ಎಷ್ಟು ಮತ್ತು ಪ್ರತಿ ಶತ ಒಟ್ಟು ನೀರಾವರಿಯಲ್ಲಿ ಎಷ್ಟು ಪ್ರಮಾಣ ಸಣ್ಣ ನೀರಾವರಿ ಇದೆ :

(ಆ) ಸಣ್ಣ ನೀರಾವರಿಯ ವಿವಿಧ ವಿಧಾನಗಳಿಂದ ನಮ್ಮ ರಾಜ್ಯದಲ್ಲಿ ನೀರಾವರಿಯಾಗಬಹುದಾದ ಪ್ರದೇಶ ಎಷ್ಟು ;

(ಇ) ಈ ಸಣ್ಣ ನೀರಾವರಿಯ ಒಟ್ಟು ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಸರಕಾರದವರು ನಾಲ್ಕು ಪ್ರಾದೇಶಿಕ ಕೈಗಾರಿಕಾ ಕಾರ್ಪೊರೇಷನ್‌ಗಳನ್ನು ರಚಿಸುವ ಯೋಜನೆ ಮೂಡಿಬಂದು ಸರಕಾರದವರ ಗಮನಕ್ಕೆ ಬಂದಿದೆಯೆ ;

(ಈ) ಸಣ್ಣ ನೀರಾವರಿಗೆ ಅದ್ಯತೆ ನೀಡಿ ಸಾಲ ಸೌಲಭ್ಯಗಳ ಮೂಲಕ ಮತ್ತು ಸರಕಾರದವರ ಕಾಮಗಾರಿಗಳ ಮೂಲಕ ತೀವ್ರವಾಗಿ ಅದನ್ನು ವಿಸ್ತರಿಸಲು ಸರಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

(ಅ) ಸಣ್ಣ ನೀರಾವರಿಯಿಂದಲೇ ನೀರಾವರಿ ಆಗುವ ಪ್ರದೇಶ 8·95 ಲಕ್ಷ ಹೆಕ್ಟೇರುಗಳು. ಒಟ್ಟು ನೀರಾವರಿಯಲ್ಲಿ ಸಣ್ಣ ನೀರಾವರಿ ಪ್ರಮಾಣ ಪ್ರತಿ ಶತ 45 (ಇದರಲ್ಲಿ ಅಂತರ್ಜಲ ಸಂಪನ್ಮೂಲ ಸೇರಿಲ್ಲ).

(ಆ) ಸುಮಾರು 12 ಲಕ್ಷ ಹೆಕ್ಟೇರುಗಳು (ಅಂತರ್ಜಲ ಬಿಟ್ಟು).

(ಇ) ಇಲ್ಲ.

(ಈ) ಸಾಲ ಸೌಲಭ್ಯಗಳನ್ನೊದಗಿಸುವುದು ಈ ಇಲಾಖೆಗೆ ಸಂಬಂಧಪಟ್ಟಿಲ್ಲ. ಸಣ್ಣ ನೀರಾವರಿಯನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮಗಳು :

(1) ಈಗಾಗಲೇ ತೆಗೆದುಕೊಂಡಿರುವ ಕೆಲಸಗಳನ್ನು ತೀವ್ರವಾಗಿ ಪೂರ್ಣಗೊಳಿಸುವಿಕೆ ;

(2) ಹೊಸದಾಗಿ ಸಾಲಿನಲ್ಲಿ 387 ಕೆಲಸಗಳನ್ನು ತೆಗೆದುಕೊಳ್ಳಲು ಉದ್ದೇಶಿಸಿರುವುದು :

(3) 68 ಹೊಸ ಕೆಲಸಗಳನ್ನು ವಿಶ್ವಬ್ಯಾಂಕಿನ ನೆರವಿನಿಂದ ತೆಗೆದುಕೊಂಡಿರುವುದು.

ವಿಷಯ : ಮಂಗಳೂರಿನಲ್ಲಿ ಉರವಲು ಕಟ್ಟಿಗೆ ಅಭಾವ.

ಪ್ರ. 99 (175) ಶ್ರೀ ಪಿ. ರಾಮಚಂದ್ರರಾವ್ (ಉಳ್ಳಾಲ) .— ಮಾನ್ಯ ಅರಣ್ಯ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಸರ್ಕಾರದವರ ಅಂದಾಜಿನ ಪ್ರಕಾರ ಮಂಗಳೂರು ನಗರದ ಉರವಲು ಕಟ್ಟಿಗೆಯ ಒಟ್ಟು ಅಗತ್ಯ ಎಷ್ಟು ?

(ಆ) ಮಂಗಳೂರು ನಗರದ ವಿವಿಧ ಕಟ್ಟಿಗೆ ಡಿಪೋಗಳಲ್ಲಿ 83ನೇ ಜನವರಿಯಿಂದ ಸಾರ್ವಜನಿಕರಿಗೆ ದೊರೆತ ಕಟ್ಟಿಗೆಯ ಪ್ರಮಾಣ ಎಷ್ಟು ;

(ಇ) ಮಂಗಳೂರು ನಗರದ ಕಟ್ಟಿಗೆ ಡಿಪೋಗಳಿಂದ ನಗರದ ಹೊರಗಿನ ಪ್ರದೇಶಗಳಿಗೆ (ಉದಾ : ಪಡೀಲಿಗೆ) ಕೊಂಡೊಯ್ಯುವುದು ಮತ್ತು ಇದು ನಗರದ ನಿವಾಸಿಗಳಿಗೆ ಸೌದೆ ಕೊರತೆಗೆ ಕಾರಣವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಈ) ಈ ರೀತಿಯ ಸೌದೆ ಅಭಾವವನ್ನು ತಡೆಗಟ್ಟಲು ಮತ್ತು ಈ ನಗರಕ್ಕೆ ಸೌದೆ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?